

ಪುಟ್ಟಣ್ಣ ಕಣಗಾಲ್ ಅವರೊಂದಿಗೆ ಬಸವರಾಜು

ಒಂದು ಸಿನಿಮಾದ ಕೆಲಸವನ್ನು ಅಚ್ಚುಕಟ್ಟಾಗಿ ಮುಗಿಸಿದ ಮೇಲೆ ಇನ್ನೊಂದು ಅವಕಾಶವನ್ನು ಕೈಗೆತ್ತಿಕೊಂಡು ಮುಂದುವರಿಯುತ್ತಿದ್ದೆವು. ತಮಿಳು ಚಿತ್ರರಂಗದಲ್ಲಿಯೂ ನನಗೆ ಅವಕಾಶ ಸಿಕ್ಕಿದ್ದು ಅದೇ ಸಂದರ್ಭದಲ್ಲಿ.

◆ **ವಿ.ಕೆ.ಮೂರ್ತಿ, ರಾಜಾರಾಂ ಅವರಿಂದ ನೀವು ಕಲಿತದ್ದು ಏನು?**

ಅವರು ಸಹಜ ಬೆಳಕನ್ನು ಶಾಟ್‌ಗಳಲ್ಲಿ ದುಡಿಸಿ ಕೊಳ್ಳುತ್ತಿದ್ದ ರೀತಿಯೇ ಬೆರಗು ಮೂಡಿಸುವಂತಹದ್ದು. ಪ್ರಕೃತಿದತ್ತವಾದ ಬೆಳಕನ್ನೇ ದೃಶ್ಯದ ತೀವ್ರತೆ, ಭಾವುಕತೆಗೆ ತಕ್ಕಂತೆ ಒಗ್ಗಿಸಿಕೊಳ್ಳುವ ಜಾಣ್ಮೆಯನ್ನು ಅವರಿಂದ ಕಲಿತೆ. ಗುರುದತ್ ನಿರ್ದೇಶನದ ಸಿನಿಮಾಗಳಲ್ಲಿ ಅವರ ಪ್ರಯೋಗಗಳ ಬಗ್ಗೆ ವ್ಯಾಪಕವಾದ ಚರ್ಚೆಗಳು ನಡೆದಿವೆ. ಕನ್ನಡದ 'ಹೂವು-ಹಣ್ಣು' ಚಿತ್ರದಲ್ಲಿಯೂ ಅಂತಹ ನಾಜೂಕುತನವನ್ನು ನಾವು ಗಮನಿಸಬಹುದು.

ನನಗೆ ಒರಿಯಾ ಸಿನಿಮಾ ಒಂದರಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ಅದಾದ ನಂತರ 'ಸೂರಿಲ್ಲಾದ ಚಿತ್ರಂಗಳ್' ತಮಿಳು ಚಿತ್ರದಲ್ಲಿ ಭಾಗ್ಯರಾಜ್ ಅವಕಾಶವಿತ್ತರು. ಅದು ನಾನು ಕೆಲಸ ಮಾಡಿದ ಮೊದಲ ತಮಿಳು ಕಮರ್ಷಿಯಲ್ ಸಿನಿಮಾ. ಅದರಲ್ಲಿ ವಿ.ಕೆ. ಮೂರ್ತಿ ಅವರಿಂದ ನಾನು ಕಲಿತಿದ್ದ ಕೆಲವು 'ಕಾಂಪೊಸಿಷನ್ಸ್' ನೋಡಬಹುದು. ಪುಟ್ಟಣ್ಣ ಕಣಗಾಲ್ ಅವರ 'ಅಮೃತ ಘಳಿಗೆ' ಸಿನಿಮಾದಲ್ಲಿಯೂ ಮೂರ್ತಿ ಅವರಿಂದ ನಾನು ಕಲಿತ ಪಾಠಗಳನ್ನು ಕಾಣಿಸಿದ್ದೇನೆ. ರಾಜಾರಾಂ ಅವರಿಂದ ನಾನು ಫ್ರೇಮಿಂಗ್ ಮಾಡುವುದನ್ನು ಕಲಿತೆ. ಅವರು ಒಂದಿಂಚೂ ಅತ್ತಿತ್ತಲಾಗದಂತೆ ಫ್ರೇಮಿಂಗ್ ಮಾಡುತ್ತಿದ್ದರು. ಅನಗತ್ಯವಾದ ಯಾವುದೂ ಅವರ ದೃಶ್ಯ ಚೌಕಟ್ಟಿನೊಳಗೆ ನುಸುಳುತ್ತಿರಲಿಲ್ಲ.

◆ **ಒಬ್ಬ ಕುಶಲ ಸಿನಿಮಾಟೊಗ್ರಫರ್ ಸಿನಿಮಾ ಮಟ್ಟಿಗೆ ಸದಾ ವಹಿಸಬೇಕಾದ ಎಚ್ಚರಿಕೆ ಎಂದರೆ ನಿಮ್ಮ ಪ್ರಕಾರ ಯಾವುದು?**

ತಾಂತ್ರಿಕವಾಗಿ ಸಾಕಷ್ಟು ಸಂಗತಿಗಳು ಇರುತ್ತವೆ. ಸಿನಿಮಾ ಪ್ರದರ್ಶನಕಲೆ. ಅಲ್ಲಿ ಅಭಿನಯವೇ ಪ್ರಧಾನ. ನಟ-ನಟಿಯರ ಮುಖದ ಭಾವಕ್ಕೆ ನಾವು ಅಚ್ಚುಕಟ್ಟಾಗಿ ಕನ್ನಡಿ ಹಿಡಿಯಬೇಕು. ಆಗ ಭಾವತೀವ್ರತೆಯು ಪ್ರೇಕ್ಷಕರಿಗೆ ಯಶಸ್ವಿಯಾಗಿ ದಾಟುತ್ತದೆ. ಹಾಗಾಗಿ ಮುಖಕ್ಕೆ ಸಮರ್ಪಕ ಲೈಟಿಂಗ್ ಮಾಡಬೇಕಾದದ್ದು ಸಾರ್ವಕಾಲಿಕವಾಗಿ ಇರಬೇಕಾದ ಎಚ್ಚರ. ಅದನ್ನು ಬಿಟ್ಟು ಬೇರೇನೋ ಮೋಡಿ ಮಾಡಲು ಹೋಗಬಾರದು. ನಟ-ನಟಿಯರ ಅಭಿನಯ ಸಾಮರ್ಥ್ಯವನ್ನು ನಾವು ನಾಜೂಕಾಗಿ ಅನಾವರಣಗೊಳಿಸಬೇಕು.